೧೩. ಅತಿಕಾಯ ಕಾಳಗ

: ಪಾತ್ರಗಳು :

ರಾಮ	ಲಕ್ಷ್ಮಣ	ಸುಗ್ರೀವ
ವಿಭೀಷಣ	ರಾವಣ	ಚಾರರು
ಅತಿಕಾಯ	ದೈತ್ಯರು	ಅಂಗದಾದಿಗಳು

: ದೃಶ್ಯಗಳು :

ಕಪಿಸೇನಾ ಸಂಭ್ರಮ, ರಾವಣನಿಗೆ ವಿಚಾರನಿರೂಪಣೆ, ರಾವಣನ ಅಟ್ಟಹಾಸ, ಅತಿಕಾಯನ ಚಿಂತೆ, ವಿಚಾರವಿನಿಮಯ, ರಾವಣನ ಜುಗುಪ್ಸೆ, ಅತಿ ಕಾಯನ ಯುದ್ಧಸನ್ನದ್ಧತೆ, ಧುರವೀಳ್ಯಗ್ರಹಣ, ಪ್ರಯಾಣಸಿದ್ಧತೆ, ಪ್ರಯಾಣ, ಸುಗ್ರೀವ ಅತಿಕಾಯರ ಯುದ್ಧ, ರಾಮ ವಿಭೀಷಣರ ಸಮಾಲೋಚನೆ, ಲಕ್ಷ್ಮಣನ ಪೌರುಷ, ರಾಮನ ವಿವೇಕ, ಲಕ್ಷ್ಮಣ ಅತಿಕಾಯರ ಸಂಭಾಷಣೆ, ಶರಪೂಜೆ, ಯುದ್ಧ, ಅತಿಕಾಯವಿಲಾಪ, ಮರಣ.

ಪದ್ಯಗಳು : ೫೬

೧೩. ಅತಿಕಾಯಕಾಳಗ

ಸೌರಾಷ್ಟ್ರ : ತ್ರಿವುಡೆ

ಮನವಲಿದು ರಘುರಾಮ ಕಪಿಗಳ । ಘನಪರಾಕ್ರಮ ಕಾರ್ಯ ತಂತ್ರಕೆ । ಎಣೆಯಗಾಣೆನೆನುತ್ತ ಪೇಳಿದ । ಇನಜನೊಡನೆ ॥ ೧ ॥

ಶಂಕರಾಭರಣ : ಅಷ್ಟ

ಭಾನುನಂದನ ಲಾಲಿಸು । ವಿಶ್ರಾಂತಿಗೆ । ಸೇನೆಯ ಅಣಿಗೊಳಿಸು ॥ ದಾನವರೊಳು ಹಗಲಿರುಳು ಹೋರಾಡುತ । ನಾನಾ ವಿಧದಿ ಬಳಲಿಹರಿಲ್ಲಿ ಸಕಲರು ॥ ೧ ॥ ತ್ರಿಶಿರ ದೇವಾಂತಕರು । ನರಾಂತಕ । ರೆಸೆವ ಮಹೋದರರು ॥ ಬಸವಳಿದಸುವಿತ್ತರಲ್ಲ ನಮ್ಮವರ ಸಾ । ಹಸಕಿದಿರುಂಟೆ ಜಯಾಂಗನೆಯೊಲಿವಳು ॥೨॥ ಇದಿರಾಗಿ ಬರುವರನ್ನು । ವೀಕ್ಷಿಸುತಿಲ್ಲಿ । ಮುದದಿಂದಲಿರುವ ನಾವು ॥ ಒದಗಿಸಿ ಕೊಳುವದಾಹಾರವ । ಗಾಯಕೆ । ವಿದಿತ ಚಿಕಿತ್ಸೆ ಸುಷೇಣಗೈಯುವನಯ್ಯ ॥ ೩ ॥

ಭೈರವಿ : ಝಂಪೆ

ಮಂದಿರದೊಳಿರುವ ರಾವಣನ ಬಳಿಗೈತಂದು । ವಂದಿಸುತ ಚಾರರು ಪರಿಯನರುಹಿದರು ॥೧॥ ವೀರದೇವಾಂತಕ ನರಾಂತಕರು ತ್ರಿಶಿರ ಸಹ । ಹೋರಾಡಿ ಕಪಿಗಳಿಂದಳಿದರೆಂದೆನುತ ॥ ೨ ॥ ಇದಿರಿಸುವರಿಲ್ಲವರ ಕದನಕರ್ಕಶರೈಸೆ । ಒದಗಿ ಸಭಯವ ದನುಜರಂಜುತಿಹರೀಗ ॥ ೩ ॥

ಸಾರಾಷ್ಟ್ರ : ಮಟ್ಟೆ

ಬೆದರಬೇಡಿರೋ ಕ್ಷುದ್ರ ಕಪಿಗಳಾ ॥ ಕದನದಲ್ಲಿ ನಾ ತರಿವೆ ನೀದಿನ ॥ ೧ ॥ ಭುವನದಲ್ಲಣಾ ಎನ್ನನೆದುರಿಸೆ । ಜವನೆ ನಡುಗುವಾ ಪರಿಯ ಮರೆತಿರೆ ॥ ೨ ॥ ತೋಳಸತ್ವಕೇ ಶೂಲಿ ನಡುಗಿದ ॥ ಪಾಲಿಸಿರ್ಪನು ಚಂದ್ರಹಾಸವ ॥ ೩ ॥ ಕ್ರೂರ ಸಿಂಹನಾ ಕೆಣಕಿ ಕುರಿಗಳು ॥ ಏರಿ ಬಂದರೆ ಬದುಕಬಲ್ಲವೆ ॥ ೪ ॥ ಸಿದ್ಧವಾಗಲಿ ಸೇನೆ ಎನ್ನುತ । ಕ್ರುದ್ಧನಾಗಿರೆ ಹಲ್ಲ ಕಡಿಯುತ ॥ ೫ ॥

ಪೀಲು : ಅಷ್ಟ

ಖತಿಯಾಂತು ನಿಂತ ತಂದೆಯ ಬಳಿಗೈದಿ । ಅತಿಕಾಯ ನಮಿಸಿ ಬಿನ್ನೈಸಿದ ನಯದಿ ॥ ಪಿತನೆ ನೀನೀ ಪರಿ ದುಡುಕದಿರಿಂದು । ಸ್ಥಿತಿಯ ಯೋಚಿಸು ಬಹುದಿದರಿಂದ ಕುಂದು ॥ ೧ ॥ ತರಳಾಟಿಕೆಯು ಬೇಡ ತೆರಳತ್ತ ನೀನು । ಪರಸೌಧಕುರಿ ಸೋಕಿ ವ್ಯಾಪಿಸಲದನು ॥ ಪರಿಕಿಸಿಕೊಳುವ ನಿವಾರ್ಣಗೈಯುವರೆ । ಬರಿದೆ ಯೋಚಿಸಿದರೆ ರಿಪುನಾಶವಹುದೆ ॥ ೨ ॥ ಭರದಿ ಹಾವನು ಹಗ್ಗವೆಂದು ಭಾವಿಸುತ । ಕರವಿಕ್ಕುವುದು ಮೌಢ್ಯವಲ್ಲವೆ ತಾತ ॥ ಧುರಧೀರ ಖಳರೆಲ್ಲ ಮಡಿದಿರ್ಪ ಬಗೆಯ ।

ಮರೆತು ನೀ ಸಮರವ ಬಯಸುತ್ತಲಿಹೆಯು ॥ ೩ ॥ ಸುತ್ತಲೂ ಬಂದು ಮುತ್ತಿಹರೈಸೆ ಪುರವ । ಕತ್ತರಿಸದೆ ಬಿಡೆ ರಿಪುಗಳ ಶಿರವ ॥ ಸತ್ತುಪರಣಿಕೆಯೊಳಂಜಿ ನಾವಿಹುದು । ಕರ್ತವ್ಯವನಿಸದು ಕ್ಲೈಬ್ಯವಾಗಿಹುದು ॥ ೪ ॥ ವೈರಿಗಳೇಕೆ ಬಂದಿಹರೆಂದು ನೋಡು । ನಾರಿ ಸೀತೆಯು ದೆಸೆಯಿಂದಲೀ ಕೇಡು । ಈ ರೀತಿ ಬಳಗವ ಕೊಲಿಸುವುದೇಕೆ । ಕ್ರೂರ ಛಲವ ಬಿಡು ಶುಭವ ಕಾಣಲಿಕೆ ॥ ೪ ॥

ಸುರುಟಿ : ಏಕ

ಏನಿದು ವಿಪರೀತ । ಆ ಹುಲು । ಮಾನವನಹನೆತ್ತ ॥ ತ್ರಾಣದಿ ಗೆಲಿದೆ ಚತುರ್ದಶ ಲೋಕವ । ಮಾನಿತನೆನಗಿದಿರೇನಾ ರಾಘವ ॥ ೧ ॥ ಯಾಗ ಫಲದಿ ಜನಿಸಿ । ಸುಜನರ । ಯೋಗಪುರುಷನೆನಿಸಿ ॥ ಸಾಗರ ದಾಟುತ ಬಂದಿಹ ದಿವಿಜರು। ಬಾಗಿ ನಮಿಪರಾ ಸೀತಾಕಾಂತನ ॥ ೨ ॥ ಜನಕಸುತೆಯು ನೀಡಿ । ರಾಮಗೆ । ಮಣಿದು ಕ್ಷಮೆಯ ಬೇಡಿ ॥ ಘನತೆಯನುಳಿಸಿಕೊ ಭ್ರಾಂತಿಯಿದೇತಕೆ । ಮುನಿಪರೆ ವಿಜಯವು ಬರುವುದೆ ಯೋಚಿಸು ॥ ೩ ॥

ಸೌರಾಷ್ಟ್ರ : ತ್ರಿವುಡೆ

ಹೋಗಿ ನೀನಾ ರಾಮಗೆರಗುತ । ಕೂಗಿ ಭಜನೆಯ ಮಾಡು ಮೊದಲೇ । ಸಾಗಿರುವ ಕಿರಿಯಯ್ಯ ಜತೆ ಚೆ । ನ್ನಾಗಬಹುದು ॥ ೧ ॥ ಜರೆವುದೇತಕೆ ತಂದೆ ನಾನೀ । ಧುರಕೆ ಬೆದರಿಹೆನೆಂದು ತಿಳಿದೆಯ । ದುರುಳವೃತ್ತಿ ಇದೇತಕೆಂದೀ । ಪರಿಯ ಕೇಳ್ದೆ ॥ ೨ ॥ ಸಕಲ ಶಾಸ್ತ್ರವನರಿತಿರುವೆ ನಾ । ವಿಕಲಮತಿ ಎಂದೆಣಿಸದಿರು ಕಾ । ಮುರ್ಕವನೆತ್ತುವ ಧೈರ್ಯವಿರೆ ರಣ । ಮುಖಕೆ ತೆರಳು ॥ ೩ ॥ ನೀಡು ನೇಮವನೀಗ ಬಲವನು । ಕೂಡಿ ನಾ ಸಂಗರಕೆ ತೆರಳುವೆ । ರೂಢಿಸಿದ ಶರವಿವ್ಯದನುವನು । ನೋಡು ಜನಕ ॥ ೪ ॥ ಸೊಗಸಿನಿಂ ಧುರವೀಳ್ಯ ನೀಡಲು । ನಗುತ ಸ್ವೀಕರಿಸಿವನು ತಂದೆಯು । ಬಗೆಯನರಿಯೆನೆನುತ್ತ ವಂದಿಸು । ತಗಲಿ ಬಂದ ॥ ೫ ॥

ಸಾವೇರಿ : ರೂಪಕ

ವೀರರೆಲ್ಲ ಬನ್ನಿರೀಗಳು । ಜಂಜಾಟವಿದನು । ಪೂರಯಿಸುವ ಕಾಲ ಬಂದುದು ॥ ಸಾರವಿರದ ಬದುಕಿಗೊಂದು । ತೀರವಾಚೆಗಿರುವುದೆಂದು । ಧೀರತನದಿ ಗುರಿಯ ನೋಡಿ । ದಾರಿ ಹಿಡಿವ ಬೇಗ ಬನ್ನಿ ॥೧॥ ಸೋಲು ಗೆಲವು ಮುಖ್ಯವಲ್ಲ । ಕಾಲದಿರವ ತಿಳಿಯೆವಲ್ಲ । ಜಾಲವಿದು ಪ್ರಪಂಚವೆಂಬ । ಮೂಲವರಿತು ಯುದ್ಧಗೈವ ॥ ೨ ॥ ಖಳವಿರೋಧಿಯಲ್ಲ ರಾಮ । ತಿಳಿಯಲವನೆ ಪುಣ್ಯನಾಮ । ಛಲದೊಳವನ ತಡೆದು ನಿಂತು । ಗೆಲುವಿಗಾಗಿ ಸೆಣಸಬೇಕು ॥ ೩ ॥ ಈ ವರೆಗಿನ ವ್ಯವಹಾರದಿ । ಸಾವಿರ ಸಾವಿರ ಕಳೆದೆವು । ಸಾವಿನ ಭಯವಿನ್ನೇತಕೆ । ಸೋವಿದು ಶುಭಗತಿಗೆ ಬನ್ನಿ ॥ ೪ ॥

ವಾರ್ಧಿಕ್ಯ

ಅತಿಕಾಯನಾಣತಿಯು ಅರ್ಥವರಿಯುತ್ತ ಖಳ । ತತಿ ಬೇಗ ಪೋಕೈಸಿ ಪೊರಡುತಿರೆ ಸಂಗರಕೆ । ಅತಿಶಯವಿದೆಂದು ಲಂಕಾಪುರದ ಪರಿಜನರು ಜಯ ಘೋಷವನೆ ಗೈದರು ॥ ಮಿತಿಮೀರಿದಬ್ಬರದಿ ಬರುವ ದೈತ್ಯರ ಕಂಡು । ಖತಿ ಯಿಂದ ಸುಗ್ರೀವ ಹನುಮಾಂಗದಾದಿಗಳ್ । ಜತೆಗೂಡಿ ತಡೆದರೇನೆಂಬೆ ಮುಂಚೂಣಿ ಯೊಳ್ ರಣರಭಸರವ ಮೊಳಗಲು ॥ ೧ ॥

ಕೇದಾರಗೌಳ : ಝಂಪೆ

ಭರದ ಪಯಣವಿದೆಲ್ಲಿಗೆ । ನಿಲ್ಲೀಗ । ಮರಣಕಾದಿಹುದು ನಿನಗೆ ॥ ತರಣಿ ಸುತ ನಾ ನೋಡೆಲಾ ॥ ಸತ್ವವಿರೆ । ಧುರ ವಿಕ್ರಮವ ತೋರೆಲಾ ॥ ೧ ॥ ಅರರೆ ಸುಗ್ರೀವ ಕೇಳು । ನಿನ್ನಧಟು । ಮೆರೆಯದೆನ್ನಿದಿರು ತಾಳು ॥ ತ್ವರಿತದಿಂದಾ ರಾಮನಾ । ಕಾಂಬೆನಾ । ತಿರುಗು ನೀ ಜವದಿ ಜಾಣ ॥ ೨ ॥ ಮೊದಲು ನಮ್ಮೊ ಡನೆ ಹಳಚು । ಆ ಮೇಲೆ । ಮದನಜನಕನನು ಸ್ಮರಿಸು ॥ ಮದವ ಮಥಿಸುವೆ ಕಣದಲಿ । ನಿನ್ನ ನಾ । ಸದೆವೆನೊಂದೇ ಕ್ಷಣದಲಿ ॥ ೩ ॥ ತಿಳಿದು ಹೋರಾಡಲೀಗ । ನಿನ್ನಿಂದ । ಕಲಿಯು ಬೇಕಾದುದಿಲ್ಲ ॥ ತೊಲಗಿಸುವೆನೀಗ ನೋಡು । ಎನುತ ಕೂ । ರಲಗನೆಸೆದನು ಭರದೊಳು ॥ ೪ ॥

ನಾದನಾಮಕ್ರಿಯೆ : ಅಷ್ಟ

ಈತನ್ಯಾರಯ್ಯ ವಿಭೀಷಣ । ಬಲು । ಖ್ಯಾತನು ಧುರದಿ ವಿಚಕ್ಷಣ ॥ ಸೋತರು ಸುಗ್ರೀವಾದಿಗಳೀಗ । ಮುಂದಿನ್ನಾತು ಕಾದುವರಾರು ನುಡಿ ಬೇಗ ॥೧॥ ರಾವಣೇಂದ್ರನ ಜಾತನೀತನು । ಬಲು । ಕೋವಿದ ಸುಗುಣವಿನೀತನು ॥ ಭಾವಿಸು ಶಿವನನ್ನು ಗೆಲುವದು । ರಣ । ಕಾವಿಗೂ ಮೀರಿದ ಬಲುಹದು ॥ ೨ ॥ ಅಣ್ಣ ನೀಡೆನಗಪ್ಪಣೆ । ಈತ । ನನ್ನೆದುರಿಸುವೆನು ತಟ್ಟನೆ ॥ ಉನ್ನತ ಶೌರ್ಯವ ಕಾಂಬೆನು । ಜಯ । ವನ್ನು ಸಂಗ್ರಹಿಸಿ ತಂದೀವೆನು ॥ ೩ ॥ ತಿಳಿದು ಯುದ್ಧವ ಮಾಡು ದುಡುಕದೆ । ವೈರಿ । ಯಾಳವ ಯೋಚಿಸಬೇಕು ಮಿಡುಕದೆ । ಕಲಿತನ ವೊಂದೆ ಸಾಕಾಗದು । ನೆಲೆ । ಯುಳಿದು ಕಾದಲು ಜಯ ದೊರೆವುದು ॥ ೪ ॥

ಕೇದಾರಗೌಳ : ಅಷ್ಟ

ಬಂದಲಕ್ಷ್ಮಣನನೀಕ್ಷಿಸುತತಿಕಾಯ ತಾ । ನೆಂದನು ನಸುನಗುತ ॥ ಚಂದದಿ ಪೇಳ್ ರಾಮಲಕ್ಷ್ಮಣರುಭಯರೊ । ಳಿಂದು ನೀನ್ಯಾರೆನುತ ॥ ೧ ॥ ದಾನವಾಗ್ರಣಿ ನಿನ್ನ ಭಾವಕೊಪ್ಪಿದ ತೆರ । ಧ್ಯಾನಿಸಿ ಕಲ್ಪಿಸಿಕೊ ॥ ನಾನರುಹಿದೊಡದು ನಿನ್ನಯ ಪ್ರಜ್ಞೆಗೆ । ನ್ಯೂನತೆ ಎನಿಸುವುದು ॥ ೨ ॥ ಅಹುದು ತಪ್ಪಲ್ಲ ಸಂಗ್ರಹಣದ ನಿಲು ವೆನ್ನೊ । ಳಿಹುದು ಸಂದೇಹ ಬೇಡ ॥ ವಹಿಸಿಕೊಂಡಿರುವ ಜೀವನದ ನೈವೇದ್ಯಕೆ । ಸಹಸವ ತೋರ್ಪೆನೀಗ ॥ ೩ ॥ ನುಡಿಯದು ನಡೆಯಾಗಿ ರೂಪುಗೊಳ್ಳಲು ಬಲು ।

ವೃಥಪುನವಿರಬೇಕಯ್ಯ । ಕಡುಗಲಿ ನೀನಾದೊಡಿದಿರಾಗು ಕಾಂಬೆ ನೀ । ಸಡಗರ ವೇತಕಯ್ಯ ॥ ೪ ॥

ಭಾಮಿನಿ

ನಿಮ್ಮನಳಿಯುವೆನೆಂಬ ಜಾಣ್ಮೆಯ । ಹಮ್ಮಿನಿಂ ಮಾರ್ಮಲೆತುದಲ್ಲಿದು । ನಮ್ಮ ನೆಲೆಯಲಿ ನಿಂತು ಹೋರಾಡಲ್ಕೆ ಸಿದ್ಧತೆಯು ॥ ನೆಮ್ಮದೀ ನಿಷ್ಠೆಯಲಿ ನೋಡುತ । ಸಮ್ಮತಿಸಿ ಪೂಜಿಸುವೆ ಶರದಲಿ । ಧರ್ಮವೇ ಗುರಿಗೊಳುವ ಪೂಜೆಯ ಸ್ವೀಕರಿಸಬೇಕು ॥ ೧ ॥

ಸೌರಾಷ್ಟ್ರ : ತ್ರಿವುಡೆ

ಇದುವೆ ನಿನಗಾಹ್ವಾನ ಬಾರೈ । ಇದು ಮಹಾಸನ ಮಂಡಿಸೈ ಮ । ತ್ತಿದುವೆ ಪಾದ್ಯಾರ್ಘ್ಯಾದಿಗಳು ಕೊಳ್ಳಿದನು ಮುದದಿ ॥ ೧ ॥ ವಿರಚಿಸುವೆ ವಿಧ್ಯುಕ್ತ ದಿಂದಲಿ । ಶರದಿ ಷೋಡಶಕ್ರಮದಿ ಪೂಜೆಯ । ಪರಮ ನೈವೇದ್ಯಕೆ ಮುಹೂರ್ತವು । ಬರಲಿ ಬೇಗ ॥ ೨ ॥ ಮೆಚ್ಚಿದೆನು ಕೇಳ್ ನಿನ್ನ ಶರವಿದ । ಕೊಚ್ಚದೇ ಧರಿಸಿದೆನು ಮೈಯಲಿ । ಇಚ್ಛೆ ಕೈಸೇರುವುದು ಹರಕೆಯಿ । ದೆಚ್ಚರಿಕೆಯು ॥ ೩ ॥ ಮನದ ಮಾರ್ಗದ ವಿನಯ ತೋರಿದೆ । ತನುವಿದಾ ದನುಜೇಂದ್ರಗರ್ಪಣೆ । ರಣದ ಸೇವಾ ಕಾರ್ಯದಕ್ಷತೆ । ಯನುವಿಗೊದಗು ॥ ೪ ॥

ಏಕ

ಉರಿಶರವಿದನೆಸೆದಿಹೆನು । ನಾ । ವರುಣ ಶರದಿ ತರಿದಿಹೆನು ॥ ಪರುವತ ವಲಗನು ಬಿಟ್ಟೆ । ಅದ । ಶರ ಕುಲಿಶದಿ ತರಿದಿಟ್ಟೆ ॥ ೧ ॥ ಮೋಘಾಸ್ತ್ರವ ಸೈರಿಸಿಕೊ । ರವಿ । ಯೋಗಾಸ್ತ್ರವೆ ಪ್ರತಿ ಇದಕೊ ॥ ಈ ಗರಳಾಸ್ತ್ರದಿ ಮಡಿವೆ । ಸಂ । ಭೋಗ ಸುಧಾಸ್ತ್ರದಿ ತರಿವೆ ॥ ೨ ॥ ಪರಿಪರಿ ಯತ್ನದೊಳಿಂತು । ಧುರ । ವಿರಚಿಸೆ ಬಳಲಿಕೆ ಬಂತು ॥ ಉರುಳುತ ಕುಸಿದನು ರಥದಿ । ಕಾ । ತರಿಸಿದ ತನ್ನಯ ಮನದಿ ॥ ೩ ॥

ಸಾಂಗತ್ಯಮಟ್ಟು : ರೂಪಕ

ಅವತಾರಪುರುಷ ಶ್ರೀರಾಮಚಂದಿರನನ್ನು । ಬವರದೊಳಿದಿರಿಪರುಂಟೆ ॥ ಅವನ ನಂಬಿರ್ಪ ವಾನರರೀಗ ಧುರದಲಿ । ಜವನ ಲೆಕ್ಕಿಸದಂತಾಗಿಹರು ॥ ೧ ॥ ಸಂದಿತೆ ತಂದೆಯಾಯುಷ್ಯ ಸಂಭ್ರಮವೆಲ್ಲ । ಕುಂದಿತೆ ಲಂಕೆಯೈಶ್ವರ್ಯ ॥ ಇಂದ್ರ ವೈಭವವೆಲ್ಲ ನೀರಗುಳ್ಳೆಯದಾಯ್ತು । ಇಂದು ರಾಮನ ವೈರದಿಂದ ॥ ೨ ॥ ಹರಿಯ ಮಾಯೆಯಿದ್ದೈಸೆ ಚಿಂತಿಸಿ ಫಲವೇನು । ಮರೆತು ದೇಹವನು ಹೋರಾಡಿ ॥ ಹರಣ ಕಾಣಿಕೆಯಿತ್ತು ಆತ್ಮ ಸಂತೋಷದಿ । ಬೆರೆತು ಮುಕ್ತಿಯ ಸೂರೆಗೊಳುವೆ॥೩॥

: ಅಷ್ಟ

ಬೆದರುವನಲ್ಲ ನಾನು । ಈ ದೇಹವೆಂಬುದು ಸ್ಥಿರವಲ್ಲವಿನ್ನು ॥ ಮುಂದ ದಿಂದಲೆಸೆಯೊ ಬ್ರಹ್ಮಾಸ್ತ್ರವನದಕೀಗ । ಹೃದಯವನಿತ್ತಪೆನು ॥ ೧ ॥ ತಿಳಿದು ಸೌಮಿತ್ರಿಯಾಗ । ಬ್ರಹ್ಮಾಸ್ತ್ರವ ನೆಳೆದೆಚ್ಚನೊಲಿದು ಬೇಗ ॥ ಕಳವಳಿಸದೆ ಕಾಯಕದೆ ಅತಿಕಾಯ । ನಳಿದ ಸಾರ್ಥಕ ಭಾವದಿ ॥ ೨ ॥

ಭಾಮಿನಿ

ಸುಗುಣ ನೀನಗಲಿದೆಯ ಹಾ ಹಾ । ಮಗನೆ ನಿನ್ನನು ಮರೆಯಲೆಂತೀ । ಬಗೆಯ ಕೈವಲ್ಯವನು ಪಡೆದೆಯ ಸಂಗರದಿ ಸೆಣಸಿ ॥ ಮಿಗಿಲು ಭಾಗ್ಯವು ನಿನ್ನ ದೆನುತಲಿ । ಒಗೆವ ಕಂಬನಿಯಲಿ ವಿಭೀಷಣ । ಖಗಕುಲಾನ್ವಯದೀಪನನು ಪರಿ ಕಿಸುತ ಕೈಮುಗಿದ ॥